ಶ್ರೀ ಕಾಗೋಡು ತಿಮ್ಮಪ್ಪ.— ತಮ್ಮ ಪ್ರಿಲಿಮಿನರಿ ಎನ್‌ಕ್ವೈರಿ ಪ್ರಕಾರ ಅದರಲ್ಲಿ ಪ್ರೈಮಾಫೇಸಿ ಇದೆಯೆಂದು ಹೇಳುತ್ತೀರಿ, ಆದ್ದರಿಂದ ಈ ಸಂಬಂಧಪಟ್ಟ ಅಧಿಕಾರಿಗಳಿಂದ ಫೈನಲ್ ರಿಪೋರ್ಟ್ ಬರ ಬೇಕಾದರೆ ವಿಚಾರಣೆ ನಡೆಸಬೇಕಾಗುತ್ತದೆ ಆ ಅಧಿಕಾರಿಗಳು ಅದೇ ಜಾಗದಲ್ಲಿ ಇದ್ದರೆ ಅವರ ಬಗ್ಗೆ ಅವರ ಬಗ್ಗೆ ಕೂಲಂಕಷವಾಗಿ ವಿಚಾರಣೆ ನಡೆಸಬೇಕಾದರೇ ಅತಂಕವಾಗುವುದಿಲ್ಲವೇ ? ಆದ್ದರಿಂದ ಫೈನಲ್ ರಿಪೋರ್ಟ್ ಬರಬೇಕು, ಎಂದರೆ ಅಪಾದನೆಗೆ ಒಳಗಾಗಿರತಕ್ಕ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ವಿಚಾರಣೆ ಮಾಡುತ್ತೀರಾ ?

ಎನ್. ರಾಚಯ್ಯ.— ಈಗಾಗಲೇ ಒಬ್ಬ ಅಧಿಕಾರಿಯನ್ನು ಬೇರೆ ಕಡೆ ವರ್ಗ ಮಾಡಿದ್ದೇವೆ. ಇನ್ನು ಉಳಿದ ಒಬ್ಬರು ಇನ್‌ಚಾರ್ಜ್ ಬಿ.ಡಿ.ಒ. ಮತ್ತು ಜ್ಯೂನಿಯರ್ ಇಂಜಿನಿಯರ್ ಅಲ್ಲಿಯೇ ಇದ್ದಾರೆ. ಅವರನ್ನು ಕೂಡಲೇ ಬೇರೆ ಕಡೆ ವರ್ಗ ಮಾಡುತ್ತೇವೆ. ಸಂಬಂಧಪಟ್ಟ ಅಧಿಕಾರಿಗಳಿಂದ ಫೈನಲ್ ರಿಪೋರ್ಟ್ ಬಂದ ಮೇಲೆ ಅವರನ್ನು ಸಪ್ಪೆನ್‌ಷನ್ ಮಾಡಬೇಕಾದರೆ ಸಸಪ್ಪೆಂಡ್ ಮಾಡುತ್ತೇವೆ ಅವರನ್ನು ಡಿಸ್‌ಮಿಸ ಮಾಡಬೇಕು. ಎಂದರೆ ಡಿಸ್‌ಮಿಸ್ ಕೂಡ ಮಾಡುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.... ಈ ಪ್ರಶ್ನೆಯ (೫) ಪ್ರಶ್ನೆಗೆ ಉತ್ತರವಾಗಿ ಇಲಾಖಾ ತನಿಖೆ ನಡೆಸುವಂತೆ ಆದೇಶವನ್ನು ನೀಡಲಾಗಿದೆ ಎಂದು ಹೇಳಿದ್ದೀರಿ ಹಾಗಾದರೆ ಅದು ಎಷ್ಟು ದಿವಸಗಳಿಂದ ಪೆಂಡಿಂಗ್ ಇದೆ ಎಂಬುದನ್ನು ಹೇಳುತ್ತೀರಾ ?

ಎನ್. ರಾಚಯ್ಯ.— ಶ್ರಿಮಾನ್ ಬಣಕಾರ್ ಅವರು ೧೭ನೇ ಜೂನ್ ೧೯೭೪ರಲ್ಲಿ ದೂರು ಕೊಟ್ಟಿದ್ದಾರೆ. ಅದೇ ಜೂನ್ ತಿಂಗಳಿನಲ್ಲಿ ಕೂಡಲೇ ಎನ್‌ಕ್ವೈರಿ ಮಾಡಬೇಕೆಂದು ಆರ್ಡರ್ ಮಾಡಿದ್ದೇನೆ. ಕೇವಲ ಒಂದೆರಡು ದಿವಸಗಳಿಲ್ಲೇ ವರದಿಯನ್ನು ತರಿಸಿಕೊಂಡು ಸೂಕ್ತಕ್ರಮತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಜಿ. ಬಣಕಾರ್.— ಬ್ಲಾಕ್ ಆಫೀಸರನ್ನು ಮತ್ತು ಸೂಪರ್‌ವೈಜರನ್ನು ಅಲ್ಲಿಂದ ವರ್ಗ ಮಾಡಬೇಕೆಂಬ ಒಂದು ಸಾರಿಯಲ್ಲ. ೧೦ ಸಾರಿ ಡಿವಿಜನಲ್ ಕಮಿಷನರ್‌ಗೆ ಫೋನ್ ಮಾಡಿದರೂ ಈಗ ಎಕಾನಮಿ ಆರ್ಡರ್ ಇದೆ ಈಗ ಸದಸ್ಯಕ್ಕೆ ಅವರನ್ನು ವರ್ಗ ಮಾಡುವುದಕ್ಕೆ ಆಗುವುದಿಲ್ಲ ಎಂದು ಆ ಅಧಿಕಾರಿಗಳನ್ನು ಫೇಲ್ಡ್ ಮಾಡುತ್ತಾರೆ, ಆ ಅಧಿಕಾರಿಗಳ ಮೇಲೆ ೫೦—೬೦ ಆಪಾದನೆಗಳು ಇವೆ ಅವರನ್ನು ವರ್ಗಮಾಡಿ ಎಂದು ಹೇಳಿದರೆ ಎಕಾನಮಿ ಮೆಜರ್ ಎಂದು ಹೇಳುತ್ತಾರೆ. ಇದು ಸರಿಯೇ ?

ಶ್ರೀ ಎನ್ ರಾಚಯ್ಯ.— ಸರ್ಕಾರದ ಹಣ ದುರುಪಯೋಗವಾಗಿರತಕ್ಕ ಸಂದರ್ಭದಲ್ಲಿ ಸಂಬಂಧ ಪಟ್ಟ ನೌಕರರನ್ನು ಅಧಿಕಾರಿಗಳು ವಿಚಾರಣೆ ಮಾಡಿ ಕ್ರಮತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಅವರನು ಬೇರೆ ಕಡೆ ವರ್ಗ ಮಾಡಬೇಕಾದರೆ ಎಕಾನಮಿ ಆರ್ಡರ್ ಪ್ರಶ್ನೆ ಬರುವುದಿಲ್ಲ. ಅಲ್ಲಿ ಆಕ್ಷೆಪಣೆ ಏನಿದೆ ಎಂದರೆ ಅನೇಕ ಅಧಿಕಾರಿಗಳನ್ನು ಅಲ್ಲಿಗೆ ಡೆಪ್ಯುಟೇಷನ್ ಮೇಲೆ ಕಳುಹಿಸಿರುವುದರಿಂದ ಆ ಸಂಬಂಧಪಟ್ಟ ಇಲಾಖೆಯವರ ಅನುಮತಿ ಪಡೆದುಕೊಂಡು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳುವುದಕ್ಕಾಗುವುದಿಲ್ಲ. ಈಗ ಜೂರಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

**Half a Million Jobs Scheme*

150 Sri B. G. Banakar (Hirekerur).—

Will the Minister for Labour and Tourism be pleased to state.—

(*a*) the total number of unemployed persons appointed in various Departments under the Half-a-Million Appointment Scheme up till date in the State;

(*b*) whether the Government is aware of the fact that in many departments the applicants who have obtained less number of marks in the S S.L.C. or other examinations have not been called for interview.

(*c*) the measures the Government purpose to take to provide appointments to the unemployed persons who have obtamed less

number of marks in the examination and who are not called even for interviews ?

SRI S. M. YAHYA (Minister for Labour and Tourism).—

(*a*) 3853 comprising 787 stipendiary employees and 3066 trainees.

(*b*) Yes.

(*c*) No measures are called for has the HMJ programme was not intended to provide Government employment to all such persons. The programme had the limited objective of creating some now employment opportunities to the educated unemployed persons. The main thrust was in the area of self employment, and assistance for setting up own ventures was available to all educated unemployed persons irrespective of the percentage of marks obtained by them in any examination.

ಶ್ರೀ ಬಿ. ಜಿ. ಬಣಕಾರ್.—೩೮೫೩ ಮಂದಿಯನ್ನು ನೇಮಕ ಮಾಡಲಾಗಿದೆ ಎಂದು ಹೇಳಿದಿರಿ. ಈ ಯೋಜನೆಯಲ್ಲಿ ನಮ್ಮ ರಾಜ್ಯದ ಒಟ್ಟು ಎಷ್ಟು ಜನರನ್ನು ನೇಮಿಸಬೇಕು ಎಂಬ ಉದ್ದೇಶವಿದೆ ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ಎಸ್. ಎಸ್. ಯಹ್ಯಾ.—ಅರ್ಧ ದಶಲಕ್ಷ ಉದ್ಯೋಗ ಒದಗಿಸುವ ಯೋಜನೆಯು ಮೂಲ ಉದ್ದೇಶ ಸರಕಾರಿ ನೌಕರಿಯನ್ನು ಕೊಡಿಸುವುದಿಲ್ಲ. ಮತ್ತು ಕ್ಲರಿಕಲ್ ಜಾಬನ್ನು ಒದಗಿಸುವ ಉದ್ದೇಶ ವಲ್ಲ, ಇದರ ಮೂಲ ಉದ್ದೇಶ ವಿದ್ಯಾವಂತ ನಿರುದ್ಯೋಗಿಗಳಿಗೆ ಸೆಲ್ಫ್ ಎಂಪ್ಲಾಯ್‌ಮೆಂಟನ್ನು ಕಲ್ಪಿಸಿ ಕೊಡುವುದ . ಇದೇ ಉದ್ದೇಶಕ್ಕಾಗಿ ಟ್ರೈನಿಂಗ್ ಸ್ಕೀಮ್ ಇರುವುದು ಈ ಸ್ಕೀಮನ್ನು ಜಾರಿಗೆ ತರಲು ಕೇಂದ್ರ ಸರ್ಕಾರದವರು ೨ ಕೋಟಿ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸೆಲ್ಫ್-ಎಂಪ್ಲಾಯ್‌ಮೆಂಟ್ ಸ್ಕೀಮ್‌ನಲ್ಲಿ ೧೪,೬೦೦ ಜನರು ಅನುಕೂಲ ಪಡೆದಿದ್ದಾರೆ ಈ ರೀತಿ ಅನುಕೂಲ ಪಡೆದವರು ಸ್ವಂತ ವ್ಯಾಪಾರವನ್ನು ಪ್ರಾರಂಭ ಮಾಡಿದರೆ, ಅವರು ಬೇರೆಯವರಿಗೆ ರೆಗ್ಯುಲರ್ ಅಪಾಯಿಂಟ್‌ಮೆಂಟ್‌ನ್ನು ಕೊಡುವುದಕ್ಕೆ ಸಾಧ್ಯವಿದೆ.

ಶ್ರೀ ಬಿ. ಜಿ. ಬಣಕಾರ್.—ನಾನು ಕೇಳಿದ್ದು, ಈ ಯೋಜನೆಯಿಂದ ಎಷ್ಟು ಜನರಿಗೆ ನೌಕರಿ ಕೊಡಿಸುವುದಕ್ಕೆ ಸಾಧ್ಯವಿದೆ ಎಂದು ?

ಶ್ರೀ ಎಸ್. ಎಂ. ಯಹ್ಯಾ.—ಇದು ಆನ್ಯುಯಲ್ ಸ್ಕೀಮ್. ಈ ಸ್ಕೀಮ್ ೧೯೭೩-೭೪ನೇ ಮಾರ್ಚ್‌ಗೆ ಕೊನೆಯಾಗಿದೆ ಈಗ ಹೊಸ ಸ್ಕೀಮ್ ಇರುವುದು ಎಂಪ್ಲಾಯ್‌ಮೆಂಟ್ ಪ್ರೊಮೋಷನ್ ಪ್ರೋಗ್ರಾಮ್ ಎಂದು.

ಶ್ರೀ ಕೆ. ಎಚ್. ಹನುಮೇಗೌಡ.—ಪ್ರತಿಭೆಗೆ ಆಧಾರವನ್ನಿಟ್ಟುಕೊಂಡು ತಾವು ಈ ಯೋಜನೆಯ ಮೂಲಕ ಕೆಲಸಗಳನ್ನು ಕೊಡುವುದಾದರೆ ಗ್ರಾಮಾಂತರದಿಂದ ಬರುವ ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸ ಸಿಗುವುದು ಕಷ್ಟವಾಗುತ್ತದೆ. ಮತ್ತು ಇದರಿಂದ ಅವರಿಗೆ ಯಾವ ರೀತಿಯಲ್ಲೂ ಅನುಕೂಲವೂ ಆಗುವುದಿಲ್ಲ. ಆದಕಾರಣ ಯಾವ ಆಧಾರ ಇಟ್ಟುಕೊಂಡು ಕೆಲಸಗಳನ್ನು ಒದಗಿಸುತ್ತೀರಿ ಎಂಬುದನ್ನು ಹೇಳುತ್ತೀರಾ?

ಶ್ರೀ ಎಸ್. ಎಂ. ಯಹ್ಯಾ.—ಇದು ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್. ಪ್ಲಾನಿಂಗ್ ಕಮಿಷನ್ ಅವರು ಒಂದು ಗೈಡ್ ಲೈನ್ ಹಾಕಿಕೊಟ್ಟಿದ್ದಾರೆ. ಅದರ ಪ್ರಕಾರ ಇದು ನಡೆದಿದೆ ಇಲ್ಲಿ ಪ್ರತಿಭೆಗೆ ಮುಖ್ಯವಲ್ಲ, ಯಾರು ಕ್ಯಾಲಿಕ್ಯುಲೇಟೆಡ್ ರಿಸ್ಕ್ ಮತ್ತು ಇನಿಷಿಯೇಟಿವ್ ತೆಗೆದುಕೊಂಡು ಮುಂದೆ ಬರುತ್ತಾರೋ, ಅವರೆಲ್ಲರಿಗೂ ಇದರ ಸಹಾಯವನ್ನು ಒದಗಿಸಲಾಗುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಇಲ್ಲಿ ೨೮೫೩ ಮಂದಿಗೆ ಇದರ ಅನುಕೂಲವಾಗಿದೆ ಎಂದು ಹೇಳಿದ್ದೀರಿ. ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ? ಮತ್ತು ಹಿಂದುಳಿದ ಜಿಲ್ಲೆಗೆ ಇದರ ಅನುಕೂಲವನ್ನು ಮೊದಲು ಕಲ್ಪಿಸಿಕೊಡಬೇಕು ಎಂಬ ಬಗ್ಗೆ ಏನಾದರೂ ಉದ್ದೇಶ ಇಟ್ಟು

(ಶ್ರೀ ಎಂ. ಬಿ. ರಾಮಸ್ವಾಮಿ)

ಕೊಳ್ಳಲಾಗಿದೆಯೇ ಅಥವಾ ಎಲ್ಲ ಜಿಲ್ಲೆಗಳಿಗೂ ಒಂದೇ ರೀತಿಯಲ್ಲಿ ಕೊಟ್ಟಿದ್ದೀರಾ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಎಂ. ಯಹ್ಯಾ.—ಇದು ಡಿಸ್ಟ್ರಿಕ್ಟ್ ವೈಸ್ ಆಗಿ ಉದ್ಯೋಗಗಳನ್ನು ಹಂಚುವಂತಹ ಸ್ಕೀಮಲ್ಲ. ಯಾರು ಇನಿಷಿಯೇಟಿವ್ ಆಗಿ ಮುಂದೆ ಬರುತ್ತಾರೋ, ಅವರಿಗೆ ಸಹಾಯ ಮಾಡುವಂತಹ ಸ್ಕೀಮ್. ಕಳೆದವರ್ಷ ನಮ್ಮಲ್ಲಿ ಬೇಕಾದಷ್ಟು ಹಣ ಇದ್ದರೂ ಸಹ ಇದರ ಉಪಯೋಗ ಪಡೆಯಲು ಯಾರೂ ಮುಂದೆ ಬರಲಿಲ್ಲ, ನಾವು ಬಹಳಷ್ಟು ಜಾಹೀರಾತನ್ನು ಸಹ ಕೊಟ್ಟೆವು. "31000 Jobs are awaiting you" ಎಂದು ಜಾಹೀರಾತನ್ನು ಕೊಟ್ಟೆವು. ತಾವುಗಳೂ ಸಹ ಇದನ್ನು ನೋಡಿರಬಹುದು, ಈ ಜಾಹೀರಾತಿನ ಪ್ರಕಾರ ಯಾರು ರಿಸ್ಕ್ ತೆಗೆದುಕೊಂಡು ಮುಂದೆ ಬಂದರೋ ಅವರಿಗೆ ಅನುಕೂಲ ಮಾಡಿಕೊಡಲಾಯಿತು. ಮುಖ್ಯವಾಗಿ ಇದು ಕೆಲಸ ಒದಗಿಸುವ ಸ್ಕೀಮಲ್ಲ, ಏನಿದ್ದರೂ ಸ್ವಂತ ಉದ್ಯೋಗವನ್ನು ಕಲ್ಪಿಸುವ ಸ್ಕೀಮಾಗಿದೆ.

ಶ್ರೀ ಪಿ. ಎಂ. ಬಂಗಿ.—ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿತ್ತು, ಅದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಯಿತು, ಎಷ್ಟು ಹಣ ಲ್ಯಾಪ್ಸ್ ಆಯಿತು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್. ಎಂ. ಯಹ್ಯಾ.—ಈ ಸ್ಕೀಮ್‌ನಲ್ಲಿ ಹಣ ಲ್ಯಾಪ್ಸ್ ಆಗುವ ಸಂಭವವಿಲ್ಲ, ಏಕೆಂದರೆ ನಾವು ಎಷ್ಟು ಹಣವನ್ನು ಖರ್ಚು ಮಾಡುತ್ತೇವೋ ಅಷ್ಟನ್ನು ಕೇಂದ್ರ ಸರ್ಕಾರದವರು ಒದಗಿಸಿಕೊಟ್ಟಿದ್ದಾರೆ. ಕಳೆದವರ್ಷ ಈ ಯೋಜನೆ ಪ್ರಾರಂಭವಾಗುವುದು ನಿಧಾನವಾಯಿತು. ಕಳೆದ ವರ್ಷ ಇದಕ್ಕಾಗಿ ಕೇಂದ್ರ ಸರ್ಕಾರದವರು ಎರಡೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ೧೯೭೪-೭೫ಕ್ಕೆ ಪ್ಲಾನಿಂಗ್ ಕಮೀಷನ್‌ನಿಂದ ಇದುವರೆಗೆ ಹಣ ಬಂದಿಲ್ಲ ಸ್ಪೆಷಲ್ ಆಫೀಸರ್ ಎಕ್ಸ್‌ಪೆಂಡೀಚರ್‌ಗಾಗಿ ನಾವು ೯೦ ಲಕ್ಷ ರೂಪಾಯಿಗಳನ್ನು ಕೇಳಿದ್ದೇವೆ. ಅದು ಇನ್ನೂ ಬಂದಿಲ್ಲ, ಈಗ ಅದು ಕರೆಸ್‌ಪಾಂಡೆನ್ಸ್‌ನಲ್ಲಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಯೋಜನೆಯಿಂದ ೧೪,೬೦೦ ಜನರಿಗೆ ಅನುಕೂಲವಾಗಿವೆ ಎಂದು ಮಾನ್ಯ ಮಂತ್ರಿಗಳು ಈಗ ತಿಳಿಸಿದರು. ರಾಜ್ಯಾಂಗದಲ್ಲಿರುವ ನಿಯಮಗಳನ್ನು ಈ ಯೋಜನೆಗೂ ಸಹ ಅನ್ವಯ ಮಾಡಿದರೆ ಅದರಿಂದ ತಪ್ಪೇನೂ ಆಗುವುದಿಲ್ಲ ಏಕೆಂದರೆ ಈ ಯೋಜನೆಯಿಂದ ೧೪,೬೦೦ ಜನರು ಉಪಯೋಗ ಪಡೆದಿದ್ದರೂ ಸಹ, ಪರಿಶಿಷ್ಟ ಜನಾಂಗದವರಿಗೆ ಮತ್ತು ಪರಿಶಿಷ್ಟ ವರ್ಗದವರಿಗೆ ಮಾತ್ರ ಉದ್ಯೋಗ ಸಿಕ್ಕಿಲ್ಲ. ಆದಕಾರಣ ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಪದಲ್ಲಿ ಈ ಯೋಜನೆಯನ್ನು ತಯಾರು ಮಾಡಿ ಈ ಜನಾಂಗದವರಿಗೆ ಸಹ ಕೆಲಸಗಳನ್ನು ಒದಗಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಅಧ್ಯಕ್ಷರು.—ಇದು ರೆಕ್ರೂಟ್‌ಮೆಂಟಿಗೆ ಸಂಬಂಧಪಟ್ಟ ವಿಷಯವಲ್ಲ ಎಂದು ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ.

SRI M. H. JAYAPRAKASH NARAYAN.—They have not created an opportunity for the weaker sections as per the Constitutional safeguards, The Hon. Minister has to create opportunities for them in this scheme also under the half a million jobs programme.

SRI S. M. YAHYA.—Under the Half a Million Jobs Scheme reservations have been made for Scheduled Castes and Scheduled Tribes in schemes like Training Schemes. Further under the new Employment Promotion programme, the Training Scheme leading to regular absorption would be given only to Scheduled Castes and Scheduled Tribes persons and none else.

SRI M. H. JAYAPRAKASH NARAYAN.—You must have a separate programme under the Half a Million Jobs Scheme to train Scheduled Castes and Scheduled Tribes persons separately.

SRI S. M. YAHYA.—The hon. Member should understand the spirit of the programme, which is to create opportunities and also to give a new orientation to employment and this new orientation has been given by making different schemes of self-employment. Regarding the Scheduled Castes and Scheduled Tribes, we have also fulfilled whatever Constitutional safeguards there are in their behalf. But if the hon. Member wants certain new scheme so that the Scheduled Castes and Scheduled Tribes people may be safeguarded, such a new scheme has not been visualised under the Half a Million Jobs Scheme.

ಶ್ರೀ ಕೋಣಂದೂರು ಲಿಂಗಪ್ಪ,—ಈ ಯೋಜನೆಯು ಮೂಲಕ ನಮ್ಮ ರಾಜ್ಯದಲ್ಲಿ ಕೆಲವು ವೈದ್ಯರಿಗೆ ಸ್ಟೈಪೆಂಡರಿ ಬೇಸಿಸ್ ಮೇಲೆ ಟ್ರೈನಿಂಗ್ ಕೊಡಲಾಯಿತು. ಅವರುಗಳಿಗೆ ಈಗ ಕೆಲಸವಿಲ್ಲ, ರಾಜ್ಯ ಸರ್ಕಾರದವರನ್ನು ಕೇಳಿದರೆ ಕೇಂದ್ರ ಸರ್ಕಾರದವರನ್ನು ಕೇಳಿ ಎಂದು ಹೇಳುತ್ತಾರೆ, ಅವರನ್ನು ಕೇಳಿದರೆ ರಾಜ್ಯ ಸರ್ಕಾರದವರನ್ನು ಕೇಳಿ ಎಂದು ಹೇಳುತ್ತಾರೆ, ಇದರಿಂದ ಅವರು ತ್ರಿಶಂಕು ಸ್ವರ್ಗದಲ್ಲಿದ್ದಾರೆ. ಅವರದ್ದೇ ಆದ ಒಂದು ಅಸೋಷಿಯೇಷನ್ ಸಹ ಇದೆ. ಆದರೂ ಪ್ರಯೋಜನವಾಗಿಲ್ಲ, ಅವರಿಗೆ ಜಾಗ್ರತೆ ಕೆಲಸ ಒದಗಿಸುತ್ತೀರಾ ?

ಶ್ರೀ ಎಸ್. ಎಂ. ಯಹ್ಯಾ.—ಈ ಸ್ಕೀಮ್ ಏನಿದ್ದರೂ ಟ್ರೈನಿಂಗ್ ಕೊಡುವುದು ಅಷ್ಟೆ, ಟ್ರೈನಿಂಗ್ ಮುಂಗಿದ ಮೇಲೆ ಕೆಲಸ ಕೊಡುವುದಿಲ್ಲ, ಟ್ರೈನಿಂಗ್ ಮುಗಿದ ಮೇಲೆ ಅವರೇ ಸ್ವಂತವಾಗಿ ಕ್ಲಿನಿಕ್ ತೆಗೆದು ಟ್ರೈನಿಂಗ್‌ನ ಉಪಯೋಗ ಪಡೆದುಕೊಳ್ಳಬೇಕು.

SMT. DAMAYANTHI BORE GOWDA.—How many ladies and physically handicapped persons are benefited by this scheme ?

SRI S. M. YAHYA.—We have given opportunity for self-employment to such of those people, who have come forward and taken the opportunity offered.

9-30 A. M.

ಶ್ರೀ ಬಿ. ಜಿ. ಬಣಕಾರ್.—ಸ್ಪಾಮಿ. ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಗೊತ್ತಿದೆ ಎಂದು ಹೇಳಿದ್ದೀರಿ- ಈ ನೇಮಕಾತಿ ಮಾಡುವಾಗ ಕಡಿಮೆ ಮಾರ್ಕ್ಸ್ ತೆಗೆದುಕೊಂಡಥ ಗ್ರಾಮಾಂತರ ಪ್ರದೇಶದಲ್ಲಿರುವ ಎಸ್.ಎಸ್.ಎಲ್ ಸಿ. ಮತ್ತು ಪದವೀಧರರ ವಿದ್ಯಾರ್ಥಿಗಳಿಗೆ ಇಂಟರ್‌ವ್ಯೂ ಬರುತ್ತಾ ಇಲ್ಲ. ಆದಂದರಿಂದ ಇವರಿಗೆ ಅನುಕೂಲತೆ ಮಾಡಿಕೊಡುವ ದೃಷ್ಟಿಯಿಂದ ಏನು ಒಂದು ವ್ಯವಸ್ಥೆ ಮಾಡಿದ್ದೀರಿ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಎಂ. ಯಹ್ಯಾ.—ಟ್ರೈನಿಂಗ್ ಸ್ಕೀಮ್‌ನಲ್ಲಿ ಸೆಲೆಕ್ಷನ್ ಮಾಡುವಾಗ ಅವರ ಮಾರ್ಕ್ಸ್ ನೋಡಿಕೊಂಡು ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಇನ್‌ಫ್ಲ್ಯೂಯೆನ್ಸ್ ಜಾಸ್ತಿಯಾಗಿ ಯಾರು ಮೆರಿಟ್ ಮೇಲೆ ಬರಬೇಕೋ ಅವರು ಬರುವುದಕ್ಕಾಗುವುದಿಲ್ಲ. ಆದುದರಿಂದ ಮೆರಿಟ್ ಪ್ರಕಾರವೇ ಇಂಟರ್‌ವ್ಯೂ ಮಾಡಬೇಕಾಗುತ್ತದೆ.

* *Preservation of Forest Wealth*

161. Sri T. R. SHAMANNA (Fort).—

Will the Minister for food and Forests be pleased to state.

the steps taken to conserve forest trees and for growing more trees in Malnad and other area to preserve forest wealth of the State?